O.S. 265/2019 PW-1

ದಿನಾಂಕಃ 26.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಮ್ಮ ಊರು 200 ಮನೆಗಳನ್ನು ಒಳಗೊಂಡಿರುತ್ತದೆ. ನಾನು ಈ ದಾವೆಯನ್ನು 2 ಗುಂಟೆ ಜಮೀನಿನ ಉದ್ದೇಶಕ್ಕಾಗಿ ಊಡಿರುತ್ತೇನೆ. ದಾವಾ ಸ್ವತ್ತಿನ ಸರ್ವೆ.ನಂ.126/7ಎ ಆಗಿರುತ್ತದೆ. ಸದರಿ ಸ್ವತ್ತು ಮೂಲತಃ ಪರಶುರಾಮಪ್ಪರವರಿರಗೆ ಸೇರಿದ್ದು ಅವರಿಂದ ನಾವು ಖರೀದಿಸಿರುತ್ತೇವೆ. ಪರಶುರಾಮಪ್ಪರವರಿಗೆ ಸದರಿ ಸ್ವತ್ತು ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲಾ . ದಾವಾ ಸ್ವತ್ತನ್ನು ಖರೀದಿಸುವಾಗ ನಾವು ಸರ್ವೆ ಮಾಡಿಸಿದ್ದೀರ ಎಂದರೆ ನನಗೆ ಗೊತ್ತಿಲ್ಲಾ . ಸರ್ವೆ.ನಂ.126/7ಎ 2 ಪೋಡುಗಳು ಆಗಿರುತ್ತವೆ. ಪ್ರತಿವಾದಿಗಳು ನನಗೆ ಗೊತ್ತು. 2ನೇ ಪ್ರತಿವಾದಿಯವರ ತಂದೆಯ ಹೆಸರು ಗುಂಡಪ್ಪ ಎಂದರೆ ಸರಿ . ಸದರಿ ಗುಂಡಪ್ಪರವರಿಗೆ 05.01.1988ರಲ್ಲಿ 40X20ಅಡಿ ನಿವೇಶನ ಹಕ್ಕುಪತ್ರ ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹಕ್ಕು ಪತ್ರದಲ್ಲಿ ಗುಂಡಪ್ಪರವರು ಮನೆಯನ್ನು ನಿರ್ಮಿಸಿಕೊಂಡು ವಾಸವಿದ್ದರು ಎಂದರೆ ಗೊತ್ತಿಲ್ಲ. 14ನೇ ಸೈಟಿಗೆ ಸಂಬಂಧಿಸಿದಂತೆ ಪ್ರಸ್ತುತ 1ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ 1ಫೋಟೋ ತೋರಿಸಲಾಗಿ ಅದರಂತೆ 1ನೇ ಪ್ರತಿವಾದಿ ಗುಡಿಸಲು ಕಟ್ಟಿಕೊಂಡು ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೆ ಸರ್ಕಾರದಿಂದ ಮನೆ ಮಂಜೂರಾಗಿದ್ದು ಅದರಂತೆ ಅವರು ಪರವಾನಗೆ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಪರವಾನಗೆ ನೀಡುವ ಸಂಧರ್ಭದಲ್ಲಿ ಪಂಚಾಯಿತಿ ಅಧಿಕಾರಿಗಳು ಪರಿಶೀಲನೆ ಮಾಡಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪರವಾನಗೆಯಲ್ಲಿ 1ನೇ ಪ್ರತಿವರಾದಿ 14ನೇ ನಿವೇಶನದಲ್ಲಿ ಅಡಿಪಾಯ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ

ಅವರು ಮನೆಯನ್ನು ನಿರ್ಮಿಸಲು ಇಟ್ಟಿಗೆ,ಮರಳು ಸೇರಿಸಿದ್ದರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ಮನೆ ಕಟ್ಟುವಾಗ ನಾನು ಅಡ್ಡಿಪಡಿಸಿದ್ದೇನೆ ಎಂದರೆ ಸಾಕ್ಷಿಯು ನನ್ನ 7ಗುಂಟೆ ಬಿಟ್ಟು ಅವರು ಮನೆ ನಿರ್ಮಿಸಿಕೊಳ್ಳಲಿ ಎಂದು ನುಡಿದಿರುತ್ತಾರೆ. ನಾನಾ ಅಡ್ಡಿ ಪಡಿಸಿದ ಕಾರಣ ನನ್ನ ವಿರುದ್ಧ O.S.232/2019ರಂತೆ ದಾವೆ ಊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ಅಸ್ತಿತ್ವದಲ್ಲಿ ಇರುವುದನ್ನು ಮರೆಮಾಚಿ ಪ್ರಸ್ತುತ ದಾವೆಯನ್ನು ಊಡಿದೆ ಎಂದರೆ ನನಗೆ ಗೊತ್ತಿಲ್ಲ. O.S.232/2019ರಲ್ಲಿ ನಾವು ಪ್ರತಿವಾದಿ ಮನೆ ನಿರ್ಮಿಸಲು ಅಡ್ಡಿಮಾಡಬಾರದು ಎಂದು ನಿರ್ಭದನೆಯಾಗಿದೆ ಎಂದರೆ ಸರಿಯಲ್ಲ. 7ಗುಂಟೆ ಜಮೀನಿಗೆ ಚೆಕ್ಕು ಬಂದಿ ಪೂರ್ವಕ್ಕೆಃಎ.ಕೆ.ಕಾಲೋನಿ, ಪಶ್ಚಿಮಕ್ಕೆಃಕಮ್ಮಾರ್ ಗಂಗಣ್ಣ, ಉತ್ತರಕ್ಕೆಃಕೃಷ್ಣಪ , ದಕ್ಷಿಣಕ್ಕೆಃದ್ಯಾಮಣ್ಣರವರ ಜಮೀನು.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.